**ಮಿಸ್ ನಂಃ 20/2024**

**ಪಿ.ಡಬ್ಲ್ಯೂಃ 1**

**ದಿನಾಂಕ 17.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ.ಎಲ್.ವಿ.ಆರ್ ವಕೀಲರಿಂದಃ**

ಅಸಲು ದಾವೆ ಸಂಖ್ಯೆ 214/2021 ರ ವಕಾಲತ್ತಿನ ದೃಢಿಕೃತ ನಕಲನ್ನು ನಿಪಿ.25 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಬಿ.ಎನ್.ಬಿ. ವಕೀಲರಿಂದಃ**

6. ನಾನು ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣವನ್ನು ಹೂಡಲು 2000 ನೇ ಇಸವಿಯಲ್ಲಿ ಕೆ ಆರ್ ನಗರದ ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟಿದ್ದ ಸದರಿ ವಕಾಲತ್ತಿನಲ್ಲಿ ನನ್ನ ಹೆಬ್ಬೆಟ್ಟನ್ನು ಹಾಕಿರುತ್ತೇನೆ. 2000 ನೇ ಇಸವಿಯ ನಂತರ ನಾನು ಕೆ.ಎಸ್.ದಿಲೀಪ್ ವಕೀಲರ ಕಚೇರಿಗೆ ಹೋಗಿರುವುದಿಲ್ಲ. 2000 ನೇ ಇಸವಿಯಲ್ಲಿ ನನಗೆ 50 ವರ್ಷ ವಯಸ್ಸಾಗಿತ್ತು. ಸಾಕ್ಷಿಯು ಮುಂದುವರೆದು ನಾನು 2020 ರಲ್ಲಿ ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟಿದ್ದು, ಆಗ ನನಗೆ 50 ವರ್ಷ ವಯಸ್ಸಾಗಿದ್ದು, ಈಗ ನನಗೆ 55 ½ ವರ್ಷ ವಯಸ್ಸಾಗಿರುತ್ತದೆ.

7. ಹರದನಹಳ್ಳಿ ಗ್ರಾಮದ ಸರ್ವೇ ನಂಬರ್ 108 ರ 2 ಎಕರೆ, ಸರ್ವೇ ನಂಬರ್ 303 ರ 2 ಎಕರೆ ಜಮೀನು ಒಂದೇ ಜಮೀನುಗಳಾಗಿದ್ದು, ಆದರೆ ಸರ್ವೇ ನಂಬರ್ ವ್ಯತ್ಯಾಸವಾಗಿದ್ದ ಕಾರಣ, ಅದನ್ನು ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ

ಸರಿಪಡಿಸಲು ನಾನು ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟಿದ್ದೆ. ನಾನು ಕೆ.ಎಸ್.ದಿಲೀಪ್ ವಕೀಲರಿಗೆ ವಕಾಲತ್ತನ್ನು ಕೊಟ್ಟ ಬಳಿಕ ಈ ನ್ಯಾಯಾಲಯಕ್ಕೆ ಬಂದಿರಲಿಲ್ಲ.

8. ದಿನಾಂಕ 04.09.2021 ರಂದು ನಾನು ಅಸಲು ದಾವೆ ಸಂಖ್ಯೆ 214/2021 ರಲ್ಲಿ ನಾನು ಇದೇ ನ್ಯಾಯಾಲಯದಲ್ಲಿ ಹಾಜರಾಗಿ ನಿಪಿ.3 ರ ಅರ್ಜಿಯನ್ನು ಮತ್ತು ನಿಪಿ.25 ರ ವಕಾಲತ್ತನ್ನು ಕೆ.ಎಸ್.ದಿಲೀಪ್ ವಕೀಲರ ಮೂಲಕ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 04.10.2021 ರಂದು ನಾನು ಅಸಲು ದಾವೆ ಸಂಖ್ಯೆ 214/2021 ರಲ್ಲಿ ನಾನು ಹಾಜರಾಗಿ ನನ್ನ ಪ್ರತಿವಾದ ಪತ್ರ ಸಲ್ಲಿಸಲು ಕಾಲಾವಕಾಶ ಕೋರಿ ಸಿ.ಪಿ.ಸಿ ಕಲಂ 148 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 06.11.2021 ರಂದು ನಾನು ಮತ್ತು 1 ನೇ ಎದುರುದಾರರು ಅಸಲು ದಾವೆ ಸಂಖ್ಯೆ 214/2021 ರಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿರುತ್ತೇವೆ ಎಂದರೆ ಸರಿಯಲ್ಲ.

9. ದಿನಾಂಕ 06.11.2021 ರಂದು ನೀವು ಅಸಲು ದಾವೆ ಸಂಖ್ಯೆ214/2021 ರಲ್ಲಿ ನ್ಯಾಯಾಲಯಕ್ಕೆ ಹಾಜರಾದ ಬಳಿಕ ಸದರಿ ದಾವೆಯಲ್ಲಿ ಎಂದಿಗೂ ಸಹ ನೀವು ಹಾಜರಾಗಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನೀವು ಅಸಲು ದಾವೆ ಸಂಖ್ಯೆ 214/2021 ರಲ್ಲಿ ಗೈರು ಹಾಜರಾದ ನಂತರ ಸದರಿ ದಾವೆಯು 1 ನೇ ಎದುರುದಾರರ ಪರ ಡಿಕ್ರಿ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

10. ಸಾಕ್ಷಿಗೆ ಈಗ ಈ ಪ್ರಕರಣದಲ್ಲಿ ತಮ್ಮ ಪರ ಸಲ್ಲಿಸಿರುವ ವಕಾಲತನ್ನು ತೋರಿಸಿ ಅದರಲ್ಲಿರುವ ಹೆಬ್ಬೆಟ್ಟಿನ ಗುರುತು ಯಾರದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕೇವಲ ಎಲ್.ವಿ.ರವಿಶಂಕರ್ ವಕೀಲರ ವಕಾಲತ್ತಿನಲ್ಲಿರುವ ಹೆಬ್ಬೆಟ್ಟಿನ ಗುರುತು ಮಾತ್ರ ನನ್ನದಾಗಿದ್ದು, ಬೇರೆ ಯಾವುದೇ ವಕೀಲರ ವಕಾಲತ್ತಿನಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದಲ್ಲ ಎಂದು ನುಡಿದಿರುತ್ತಾರೆ.

11. ದಿನಾಂಕ 23.11.2022 ರಂದು ನೀವು ಅಸಲು ದಾವೆ ಸಂಖ್ಯೆ 214/2021 ರಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಸೊಸೆಯ ಪ್ರಕರಣವು ಸಹ ಇದೇ ನ್ಯಾಯಾಲಯದಲ್ಲಿ ಇದ್ದಕಾರಣ ನಾನು ಈ ನ್ಯಾಯಾಲಯಕ್ಕೆ ಹೋಗಿ ಬರುತ್ತಿದ್ದೆ ಎಂದು ನುಡಿದಿರುತ್ತಾರೆ. ನನ್ನ ಸೊಸೆ ಪ್ರಕರಣವು ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣವಾಗಿತ್ತು. ನನ್ನ ಸೊಸೆಯ ಆತ್ಮಹತ್ಯೆ ಪ್ರಕರಣದ ಕಡತವು ಮೈಸೂರಿನ ನ್ಯಾಯಾಲಯದಲ್ಲಿದೆ. ದಿನಾಂಕ 23.11.2022 ರಂದು ಇದೇ ನ್ಯಾಯಾಲಯದಲ್ಲಿ ನನ್ನ ಸೊಸೆಯ ಆತ್ಮಹತ್ಯೆ ಪ್ರಕರಣವು ವಿಚಾರಣೆಗೆ ಇತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

12. 1 ನೇ ಎದುರುದಾರರು ಜಮೀನಿನ ಸಂಬಂಧ stay order ತಂದಿದ್ದಾಗ ನನಗೆ ಅಸಲು ದಾವೆ ಸಂಖ್ಯೆ 214/2021 ರ ದಾವೆಯ ಬಗ್ಗೆ ಗೊತ್ತಾಗಿರುತ್ತದೆ. stay order ಆದ ಬಳಿಕ 1 ನೇ ಎದುರುದಾರರು ನಿಮ್ಮ ವಿರುದ್ಧ ಸಾಲಿಗ್ರಾಮ ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿದ್ದಾಗ ನೀವು 1 ನೇ ಎದುರುದಾರರಿಗೆ ತೊಂದರೆ ಕೊಡಬಾರದು ಎಂದು ಪೋಲಿಸರು ನಿಮಗೆ ಹೇಳಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ತಾವು ನ್ಯಾಯಾಲಯದಲ್ಲಿ ದಾವೆ ಹೂಡಿರುವುದಾಗಿ ಪೋಲಿಸ್ ಠಾಣೆಯಲ್ಲಿ ಹೇಳಿದ್ದು, ಸದರಿ ದಾವೆ ತೀರ್ಮಾನವಾಗುವವರೆಗೂ ನೀವು ಎಸ್.ಎಂ.ಜಗದೀಶ್ ತೊಂದರೆ ಕೊಡಬಾರದು ಎಂದು ಪೋಲಿಸರು 1 ನೇ ಎದುರುದಾರರಿಗೆ ಹೇಳಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

13. 1 ನೇ ಎದುರುದಾರರು ನ್ಯಾಯಾಲಯದಿಂದ stay order ತಂದಿದ್ದರು ಸಹ ನಾನು 1 ನೇ ಎದುರುದಾರರ ಜಮೀನಿನಲ್ಲಿ ಬೆಳೆದಿದ್ದ ಜೋಳದ ಬೆಳೆಯನ್ನು ನಾಶಪಡಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನ್ಯಾಯಾಲಯದಿಂದ stay order ತಂದಿದ್ದರು ಸಹ ನಾನು 1 ನೇ ಎದುರುದಾರರಿಗೆ ತೊಂದರೆ ಕೊಟ್ಟ ಕಾರಣ 1 ನೇ ಎದುರುದಾರರು ನ್ಯಾಯಾಲಯದಲ್ಲಿ ನಿಪಿ.14 ರ ಅರ್ಜಿಯನ್ನು ಸಲ್ಲಿಸಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

14. ಅಸಲು ದಾವೆ ಸಂಖ್ಯೆ 214/2021 ರ ದಾವೆಯ ಬಗ್ಗೆ ನಿಮಗೆ ಮೊದಲೇ ಗೊತ್ತಿತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 2024 ರಲಿಪ್ಲಿ ಪೋಲಿಸ್ ಠಾಣೆಯಲ್ಲಿ ನನಗೆ ಒಂದು ನೋಟಿಸನ್ನು ಕೊಟ್ಟಿದ್ದು, ಸದರಿ ನೋಟಿಸನ್ನು ನಾನು ನನ್ನ ವಕೀಲರಾದ ಎಲ್.ವಿ.ರವಿಶಂಕರ್ ರವರಿಗೆ ಕೊಟ್ಟ ನಂತರದಲ್ಲಿಯೇ ನನಗೆ ಅಸಲು ದಾವೆ ಸಂಖ್ಯೆ 214/2021 ರ ದಾವೆಯ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ.

**ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**